ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4233
ಸದಸ್ಯರ ಹೆಸರು : ಶ್ರೀ ರಾಮಲಿಂಗಾ ರೆಡ್ಡಿ (ಬಿಟಿಎಂ ಲೇಔಟ್)
ಉತ್ತರಿಸಬೇಕಾದ ದಿನಾಂಕ : 30.03.2021
ಉತ್ತರಿಸುವ ಸಚಿವರು : ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರದಲ್ಲಿ ವಾಹನ ನಿಲುಗಡೆ ಇಲ್ಲದ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳಿಗೆ (ದ್ವಿಚಕ್ರ/ಕಾರು) ವಿಧಿಸುತ್ತಿರುವ ದಂಡದ ಮೊತ್ತ ಎಷ್ಟು ;</td><td>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 286 ಸಾಇಪಾ 2016(ಪಿ-2), ದಿನಾಂಕ:25.06.2019ರ ಪ್ರಕಾರ ಬೆಂಗಳೂರು ನಗರದಲ್ಲಿ ವಾಹನ ನಿಲುಗಡೆ ಇಲ್ಲದ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ ರೀತ್ಯಾ ರೂ.1,000/-ಗಳನ್ನು ದಂಡದ ರೂಪದಲ್ಲಿ ವಿಧಿಸಲಾಗುತ್ತಿದೆ.</td></tr>
<tr><td>ಆ)</td><td>2019-2020ನೇ ಹಾಗೂ ಜನವರಿ 2021 ರಿಂದ ಈವರೆವಿಗೂ ನಿಲುಗಡೆ ಇಲ್ಲದ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳಿಂದ ಸಂದಾಯವಾಗಿರುವ ದಂಡದ ಮೊತ್ತ ಎಷ್ಟು ;</td><td>2019-20ನೇ ಹಾಗೂ ಜನವರಿ 2021 ರಿಂದ ಈವರೆಗೂ ನಿಲುಗಡೆ ಇಲ್ಲದ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳು ಹಾಗೂ ಸಂಗ್ರಹಿಸಿದ ದಂಡದ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ವರ್ಷ</th><th>ದಾಖಲಿಸಿರುವ ಪ್ರಕರಣಗಳು</th><th>ಸಂಗ್ರಹಿಸಿರುವ ದಂಡದ ಮೊತ್ತ</th></tr>
<tr><td>2019</td><td>1122632</td><td>8,68,24,400/-</td></tr>
<tr><td>2020</td><td>747191</td><td>10,36,67,300/-</td></tr>
<tr><td>2021 ಮಾರ್ಚ್ (21ರವರೆಗೆ)</td><td>248112</td><td>5,14,56,200/-</td></tr>
<tr><td>ಒಟ್ಟು</td><td>2117935</td><td>24,19,47,900/-</td></tr>
</table></td></tr>
<tr><td>ಇ)</td><td>ಬೆಂಗಳೂರು ನಗರದಲ್ಲಿ ಪೊಲೀಸ್ ಇಲಾಖೆಯಿಂದ ನಿಯೋಜಿಸಿರುವ ಒಟ್ಟು ಟೋ (Tow) ವಾಹನಗಳೆಷ್ಟು ;</td><td>ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಟೆಂಡರ್ ಮುಖಾಂತರ ಒಟ್ಟು 100 ಸಂಖ್ಯೆ ಟೋಯಿಂಗ್ ವಾಹನಗಳನ್ನು ನಿಯೋಜಿಸಲಾಗಿದೆ.</td></tr>
<tr><td>ಈ)</td><td>ನಿಲುಗಡೆ ಇಲ್ಲದ ಸ್ಥಳಗಳಲ್ಲಿ ನಿಲ್ಲಿಸುವ ವಾಹನ ಸವಾರರ ಗಮನ ಸೆಳೆಯಲು ಮಾಡುವ ಸೈರನ್ ಶಬ್ಧದ ಸಮಯವೆಷ್ಟು ;</td><td>ಸಮಯ ನಿಗಧಿಪಡಿಸಿರುವುದಿಲ್ಲ.</td></tr>
</table>

ಉ)	ಟೋ (Tow) ಮಾಡುವ ವಾಹನಗಳಿಂದ ಮತ್ತು ವಾಹನ ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿರುತ್ತದೆ.
ಊ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ಒದಗಿಸುವುದು)	1. ವಾಹನಗಳನ್ನು ಟೋಯಿಂಗ್ ಮಾಡುವಾಗ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಸುತ್ತೋಲೆಗಳನ್ನು ಹೊರಡಿಸಿದ್ದು, ಸದರಿ ಸುತ್ತೋಲೆಗಳ ಪ್ರತಿಯನ್ನು **ಅನುಬಂಧ – 1, 2 & 3** ರಲ್ಲಿ ನೀಡಲಾಗಿದೆ. 2. ಈ ಬಗ್ಗೆ ಪರಿಶೀಲಿಸಿ ಸರಿಪಡಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.

ಹೆಚ್‌ಡಿ 239 ಎಸ್‌ಎಸ್‌ಟಿ 2021

(ಅರಗ ಜ್ಞಾನೇಂದ್ರ)
ಗೃಹ ಸಚಿವರು